| | |
|---|---|
| Test Paper : **III** | Test Booklet Serial No. : ____________ |
| Test Subject : **KANNADA** | OMR Sheet No. : ____________ |
| Test Subject Code : **K-0217** | Roll No. ____________ (Figures as per admission card) |

**Name & Signature of Invigilator/s**

Signature : ______________________

Name : ______________________

**Paper : III**

**Subject : KANNADA**

Time : 2 Hours 30 Minutes | Maximum Marks : 150

Number of Pages in this Booklet : **16** | Number of Questions in this Booklet : **75**

**ಅಭ್ಯರ್ಥಿಗಳಿಗೆ ಸೂಚನೆಗಳು**

1. ಈ ಪುಟದ ಮೇಲ್ತುದಿಯಲ್ಲಿ ಒದಗಿಸಿದ ಸ್ಥಳದಲ್ಲಿ ನಿಮ್ಮ ರೋಲ್ ನಂಬರನ್ನು ಬರೆಯಿರಿ.
2. ಈ ಪತ್ರಿಕೆಯು ಬಹು ಆಯ್ಕೆ ವಿಧದ ಎಪ್ಪತ್ತೈದು ಪ್ರಶ್ನೆಗಳನ್ನು ಒಳಗೊಂಡಿದೆ.
3. ಪರೀಕ್ಷೆಯ ಪ್ರಾರಂಭದಲ್ಲಿ, ಪ್ರಶ್ನೆಪುಸ್ತಿಕೆಯನ್ನು ನಿಮಗೆ ನೀಡಲಾಗುವುದು. ಮೊದಲ 5 ನಿಮಿಷಗಳಲ್ಲಿ ನೀವು ಪುಸ್ತಿಕೆಯನ್ನು ತೆರೆಯಲು ಮತ್ತು ಕೆಳಗಿನಂತೆ ಕಡ್ಡಾಯವಾಗಿ ಪರೀಕ್ಷಿಸಲು ಕೋರಲಾಗಿದೆ.
   (i) ಪ್ರಶ್ನೆ ಪುಸ್ತಿಕೆಗೆ ಪ್ರವೇಶಾವಕಾಶ ಪಡೆಯಲು, ಈ ಹೊದಿಕೆ ಪುಟದ ಅಂಚಿನ ಮೇಲಿರುವ ಪೇಪರ್ ಸೀಲನ್ನು ಹರಿಯಿರಿ. ಸ್ಟಿಕ್ಕರ್ ಸೀಲ್ ಇಲ್ಲದ ಅಥವಾ ತೆರೆದ ಪುಸ್ತಿಕೆಯನ್ನು ಸ್ವೀಕರಿಸಬೇಡಿ.
   (ii) **ಪುಸ್ತಿಕೆಯಲ್ಲಿನ ಪ್ರಶ್ನೆಗಳ ಸಂಖ್ಯೆ ಮತ್ತು ಪುಟಗಳ ಸಂಖ್ಯೆಯನ್ನು ಮುಖಪುಟದ ಮೇಲೆ ಮುದ್ರಿಸಿದ ಮಾಹಿತಿಯೊಂದಿಗೆ ತಾಳೆ ನೋಡಿರಿ. ಪುಟಗಳು/ಪ್ರಶ್ನೆಗಳು ಕಾಣೆಯಾದ, ಅಥವಾ ದ್ವಿಪ್ರತಿ ಅಥವಾ ಅನುಕ್ರಮವಾಗಿಲ್ಲದ ಅಥವಾ ಇತರ ಯಾವುದೇ ವ್ಯತ್ಯಾಸದ ದೋಷಪೂರಿತ ಪುಸ್ತಿಕೆಯನ್ನು ಕೂಡಲೆ 5 ನಿಮಿಷದ ಅವಧಿ ಒಳಗೆ, ಸಂವೀಕ್ಷಕರಿಂದ ಸರಿ ಇರುವ ಪುಸ್ತಿಕೆಗೆ ಬದಲಾಯಿಸಿಕೊಳ್ಳಬೇಕು. ಆ ಬಳಿಕ ಪ್ರಶ್ನೆ ಪತ್ರಿಕೆಯನ್ನು ಬದಲಾಯಿಸಲಾಗುವುದಿಲ್ಲ, ಯಾವುದೇ ಹೆಚ್ಚು ಸಮಯವನ್ನೂ ಕೊಡಲಾಗುವುದಿಲ್ಲ.**
4. ಪ್ರತಿಯೊಂದು ಪ್ರಶ್ನೆಗೂ (A), (B), (C) ಮತ್ತು (D) ಎಂದು ಗುರುತಿಸಿದ ನಾಲ್ಕು ಪರ್ಯಾಯ ಉತ್ತರಗಳಿವೆ. ನೀವು ಪ್ರಶ್ನೆಯ ಎದುರು ಸರಿಯಾದ ಉತ್ತರದ ಮೇಲೆ, ಕೆಳಗೆ ಕಾಣಿಸಿದಂತೆ ಅಂಡಾಕೃತಿಯನ್ನು ಕಪ್ಪಾಗಿಸಬೇಕು.
   **ಉದಾಹರಣೆ:** (A) (B) ● (D)
   (C) ಸರಿಯಾದ ಉತ್ತರವಾಗಿದ್ದಾಗ.
5. ಪ್ರಶ್ನೆಗಳಿಗೆ ಉತ್ತರಗಳನ್ನು, **ಪತ್ರಿಕೆ III ಪುಸ್ತಿಕೆಯೊಳಗೆ ಕೊಟ್ಟಿರುವ OMR ಉತ್ತರ ಹಾಳೆಯಲ್ಲಿ ಮಾತ್ರವೇ ಸೂಚಿಸತಕ್ಕದ್ದು.** OMR ಹಾಳೆಯಲ್ಲಿನ ಅಂಡಾಕೃತಿ ಹೊರತುಪಡಿಸಿ ಬೇರೆ ಯಾವುದೇ ಸ್ಥಳದಲ್ಲಿ ಗುರುತಿಸಿದರೆ, ಅದರ ಮೌಲ್ಯಮಾಪನ ಮಾಡಲಾಗುವುದಿಲ್ಲ.
6. OMR ಉತ್ತರ ಹಾಳೆಯಲ್ಲಿ ಕೊಟ್ಟ ಸೂಚನೆಗಳನ್ನು ಜಾಗರೂಕತೆಯಿಂದ ಓದಿರಿ.
7. ಎಲ್ಲಾ ಕರಡು ಕೆಲಸವನ್ನು ಪುಸ್ತಿಕೆಯ ಕೊನೆಯಲ್ಲಿ ಮಾಡತಕ್ಕದ್ದು.
8. ನಿಮ್ಮ ಗುರುತನ್ನು ಬಹಿರಂಗಪಡಿಸಬಹುದಾದ ನಿಮ್ಮ ಹೆಸರು ಅಥವಾ ಯಾವುದೇ ಚಿಹ್ನೆಯನ್ನು, ಸಂಗತವಾದ ಸ್ಥಳ ಹೊರತು ಪಡಿಸಿ, OMR ಉತ್ತರ ಹಾಳೆಯ ಯಾವುದೇ ಭಾಗದಲ್ಲಿ ಬರೆದರೆ, ನೀವು ಅನರ್ಹತೆಗೆ ಬಾಧ್ಯರಾಗಿರುತ್ತೀರಿ.
9. ಪರೀಕ್ಷೆಯು ಮುಗಿದನಂತರ, ಕಡ್ಡಾಯವಾಗಿ OMR ಉತ್ತರ ಹಾಳೆಯನ್ನು ಸಂವೀಕ್ಷಕರಿಗೆ ನೀವು ಹಿಂತಿರುಗಿಸಬೇಕು ಮತ್ತು ಪರೀಕ್ಷಾ ಕೊಠಡಿಯ ಹೊರಗೆ OMR ನ್ನು ನಿಮ್ಮೊಂದಿಗೆ ಕೊಂಡೊಯ್ಯಕೂಡದು.
10. ಪರೀಕ್ಷೆಯ ನಂತರ, ಪರೀಕ್ಷಾ ಪ್ರಶ್ನೆ ಪತ್ರಿಕೆಯನ್ನು ಮತ್ತು ನಕಲು OMR ಉತ್ತರ ಹಾಳೆಯನ್ನು ನಿಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.
11. **ನೀಲಿ/ಕಪ್ಪು ಬಾಲ್‌ಪಾಯಿಂಟ್ ಪೆನ್ ಮಾತ್ರವೇ ಉಪಯೋಗಿಸಿರಿ.**
12. **ಕ್ಯಾಲ್ಕುಲೇಟರ್, ವಿದ್ಯುನ್ಮಾನ ಉಪಕರಣ ಅಥವಾ ಲಾಗ್ ಟೇಬಲ್ ಇತ್ಯಾದಿಯ ಉಪಯೋಗವನ್ನು ನಿಷೇಧಿಸಲಾಗಿದೆ.**
13. **ಸರಿ ಅಲ್ಲದ ಉತ್ತರಗಳಿಗೆ ಋಣ ಅಂಕ ಇರುವುದಿಲ್ಲ.**
14. **ಕನ್ನಡ ಮತ್ತು ಇಂಗ್ಲೀಷ್ ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬಂದಲ್ಲಿ, ಇಂಗ್ಲೀಷ್ ಆವೃತ್ತಿಗಳಲ್ಲಿರುವುದೇ ಅಂತಿಮವೆಂದು ಪರಿಗಣಿಸಬೇಕು.**

**Instructions for the Candidates**

1. Write your roll number in the space provided on the top of this page.
2. This paper consists of seventy five multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   (i) To have access to the Question Booklet, tear off the paper seal on the edge of the cover page. Do not accept a booklet without sticker seal or open booklet.
   (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
4. Each item has four alternative responses marked (A), (B), (C) and (D). You have to darken the circle as indicated below on the correct response against each item.
   **Example** : (A) (B) ● (D)
   where (C) is the correct response.
5. Your responses to the question of Paper III are to be indicated in the **OMR Sheet kept inside the Booklet**. If you mark at any place other than in the circles in OMR Sheet, it will not be evaluated.
6. Read the instructions given in OMR carefully.
7. Rough Work is to be done in the end of this booklet.
8. If you write your name or put any mark on any part of the OMR Answer Sheet, except for the space allotted for the relevant entries, which may disclose your identity, you will render yourself liable to disqualification.
9. You have to return the test OMR Answer Sheet to the invigilators at the end of the examination compulsorily and must NOT carry it with you outside the Examination Hall.
10. You can take away question booklet and carbon copy of OMR Answer Sheet after the examination.
11. **Use only Blue/Black Ball point pen.**
12. **Use of any calculator, Electronic gadgets or log table etc., is prohibited.**
13. **There is no negative marks for incorrect answers.**
14. **In case of any discrepancy found in the Kannada translation of a question booklet the question in English version shall be taken as final.**

Total Number of Pages : 16

# ಕನ್ನಡ

## ಪೇಪರ್ – III

**ಗಮನಿಸಿ :** ಈ ಪತ್ರಿಕೆಯು **ಎಪ್ಪತ್ತೈದು (75)** ವಸ್ತುನಿಷ್ಠ ಮಾದರಿಯ ಪ್ರಶ್ನೆಗಳನ್ನೊಳಗೊಂಡಿದ್ದು, **ಪ್ರತಿಯೊಂದು** ಪ್ರಶ್ನೆಯೂ **ಎರಡು (2)** ಅಂಕಗಳನ್ನು ಹೊಂದಿದೆ. **ಎಲ್ಲಾ** ಪ್ರಶ್ನೆಗಳೂ **ಕಡ್ಡಾಯ.**

**1.** ಹಲ್ಮಿಡಿ ಶಾಸನದಲ್ಲಿ ಸ್ತುತಿಸಲ್ಪಟ್ಟ ದೈವವು

(A) ಅಚ್ಯುತ

(B) ಶಿವ

(C) ಬ್ರಹ್ಮ

(D) ಪಶುಪತಿ

**2.** 'ನಲ್ಲಳ ಮೃದು ಮೃಣಾಳ ಕೋಮಳ ಬಾಹು ಪಾಶಂಗಳೆ ಯಮಪಾಶಂಗಳಾಗೆ ' ಈ ವಾಕ್ಯವು ಬರುವ ಕಾವ್ಯ

(A) ಯಶೋಧರ ಚರಿತೆ

(B) ವಿಕ್ರಮಾರ್ಜುನ ವಿಜಯ

(C) ರಾಮಚಂದ್ರಚರಿತ ಪುರಾಣ

(D) ಕರ್ಣಾಟಕ ಕಾದಂಬರಿ

**3.** 'ದಶಾಸ್ಯ'ನ ಪಾತ್ರ ಬರುವ ಕಾವ್ಯ

(A) ರನ್ನನ ಗದಾಯುದ್ಧ

(B) ಅಜಿತನಾಥ ಪುರಾಣ

(C) ಆದಿಪುರಾಣ

(D) ರಾಮಚಂದ್ರಚರಿತ ಪುರಾಣ

**4.** 'ಕರ್ಬಿನ ಬಿಲ್ಲಂ ನನೆಯ ನಾರಿಗಂ ಪುಟ್ಟಿದವೋಲ್' – ಎನ್ನುವುದು

(A) ಮನ್ಮಥನ ಸ್ವರೂಪವನ್ನು ವಿವರಿಸುತ್ತದೆ

(B) ಸೌಂದರ್ಯವನ್ನು ಬಣ್ಣಿಸುವ ಬಗೆ

(C) ಕಬ್ಬು ಮತ್ತು ಹೂವನ್ನು ಬಣ್ಣಿಸುವ ಬಗೆ

(D) ಕಾಮನ ಬಿಲ್ಲನ್ನು ಸೂಚಿಸುವ ಬಗೆ

**5.** ಎಲ್ಲಾ ಆಶ್ವಾಸಗಳಲ್ಲೂ ಶೃಂಗಾರ ರಸವನ್ನು ನಿರೂಪಿಸುವ ಕಾವ್ಯ

(A) ಯಶೋಧರ ಚರಿತೆ

(B) ಲೀಲಾವತಿ ಪ್ರಬಂಧಂ

(C) ಆದಿಪುರಾಣ

(D) ಜಗನ್ನಾಥ ವಿಜಯ

**6.** 'ಗೋರಕ್ಷ' ಪಾತ್ರ ಬರುವ ಕನ್ನಡ ಕಾವ್ಯ

(A) ಹರಿಶ್ಚಂದ್ರ ಕಾವ್ಯ

(B) ಮೋಹನ ತರಂಗಿಣಿ

(C) ಗದಾಯುದ್ಧ

(D) ಪ್ರಭುಲಿಂಗ ಲೀಲೆ

**7.** 'ತೊರವೆ ರಾಮಾಯಣ'ದ ಛಂದಸ್ಸು

(A) ಭಾಮಿನಿ ಷಟ್ಪದಿ

(B) ವಾರ್ಧಕ ಷಟ್ಪದಿ

(C) ಸಾಂಗತ್ಯ

(D) ರಗಳೆ

**8.** 'ಭಕ್ತಿ ಭಂಡಾರಿ ಬಸವಣ್ಣ' – ಕೃತಿಯನ್ನು ರಚಿಸಿದವರು

(A) ಎಚ್. ತಿಪ್ಪೇರುದ್ರ ಸ್ವಾಮಿ

(B) ಎಲ್. ಬಸವರಾಜು

(C) ಎಂ. ಆರ್. ಶ್ರೀನಿವಾಸ ಮೂರ್ತಿ

(D) ಎಂ. ಚಿದಾನಂದ ಮೂರ್ತಿ

9. ''ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು'' – ಎಂಬ ಮಾತು ಈ ಕೃತಿಯನ್ನು ಕುರಿತದ್ದು

(A) ಗದಾಯುದ್ಧ

(B) ವೀರೇಶ ಚರಿತೆ

(C) ಹದಿಬದೆಯ ಧರ್ಮ

(D) ರಾಮಾಶ್ವಮೇಧಂ

10. 'ಕಪಿಲ ಸಿದ್ಧ ಮಲ್ಲಿಕಾರ್ಜುನ' – ಇವರ ಅಂಕಿತ

(A) ಅಕ್ಕಮಹಾದೇವಿ

(B) ಸಿದ್ಧರಾಮ

(C) ಅಲ್ಲಮ ಪ್ರಭು

(D) ಜೇಡರ ದಾಸಿಮಯ್ಯ

11. 'ಬರಿಗೊಡಗಳಿಗೆ ಸಮಾಧಾನ ಹೇಳುತಿದೆ ನೀರಿಲ್ಲದ ನಲ್ಲಿ' – ಈ ಸಾಲನ್ನು ಬರೆದ ಕವಿ

(A) ನಿಸಾರ್ ಅಹಮ್ಮದ್

(B) ಕೆ. ಎಸ್. ನರಸಿಂಹಸ್ವಾಮಿ

(C) ಬಿ. ಸಿ. ರಾಮಚಂದ್ರ ಶರ್ಮ

(D) ಚೆನ್ನವೀರ ಕಣವಿ

12. 'ಶಾರದ ಯಾಮಿನಿ' ಕವನವು ಈ ಕವಿ ಬರೆದದ್ದು

(A) ಪು.ತಿ.ನ.

(B) ಜಿ. ಎಸ್. ಶಿವರುದ್ರಪ್ಪ

(C) ಕುವೆಂಪು

(D) ಜಿ. ಪಿ. ರಾಜರತ್ನಂ

13. 'ವಿಭೂತಿ ಪೂಜೆ' ಇದೊಂದು

(A) ಕಾದಂಬರಿ

(B) ನಾಟಕ

(C) ಕಥೆ

(D) ವಿಮರ್ಶೆ

14. ಇವು ಗಳಗನಾಥರ ಕಾದಂಬರಿಗಳು

(A) ಮಾಧವ ಕರುಣಾ ವಿಲಾಸ ಮತ್ತು ಪದ್ಮ ನಯನೆ

(B) ದುರ್ಗೇಶ ನಂದಿನಿ ಮತ್ತು ದೇವಿ ಚೌಧುರಾಣಿ

(C) ಮುಸುಕು ತೆಗೆಯೆ ಮಾಯಾಂಗನೆ ಮತ್ತು ಪ್ರೇಮಪಾಶ

(D) ಸಪ್ನ ಚಮತ್ಕಾರ ಮತ್ತು ನಳ ದಮಯಂತಿ

15. ಉತ್ತಮ ಪುರುಷ ನಿರೂಪಣೆಯ ಕೃತಿ

(A) ಮರಳಿ ಮಣ್ಣಿಗೆ

(B) ಅಳಿದ ಮೇಲೆ

(C) ಕಾನೂರು ಸುಬ್ಬಮ್ಮ ಹೆಗ್ಗಡಿತಿ

(D) ಮಾಡಿದ್ದುಣ್ಣೋ ಮಹಾರಾಯ

16. 'ಬಸವರಾಜ' – ಈ ಪಾತ್ರವಿರುವ ಕಾದಂಬರಿ

(A) ಚಿದಂಬರ ರಹಸ್ಯ

(B) ಅಳಿದ ಮೇಲೆ

(C) ಸೂರ್ಯನ ಕುದುರೆ

(D) ಬಿರುಕು

17. 'ಚಂದನ' ಇದು ಇವರ ಅಭಿನಂದನಾ ಗ್ರಂಥ

(A) ಚೆನ್ನವೀರ ಕಣವಿ

(B) ಕೆ. ಎಸ್. ನರಸಿಂಹಸ್ವಾಮಿ

(C) ದ. ರಾ. ಬೇಂದ್ರೆ

(D) ಜಿ. ಪಿ. ರಾಜರತ್ನಂ

18. ಇದು ಕಥನ ಕವನ

(A) ನಾಗಿ

(B) ಹೊಕ್ಕಳಲ್ಲಿ ಹೂವಿಲ್ಲ

(C) ಕರಿಮಾಯಿ

(D) ಬೆಳಗು

19. ಪಂಪ ಪ್ರಶಸ್ತಿ ಪಡೆದ ಕೃತಿ

(A) ಆಕಾಶ ಬುಟ್ಟಿ

(B) ಸುವರ್ಣ ಪುತ್ಥಳಿ

(C) ವರ್ಧಮಾನ

(D) ಚೆಲುವು-ಒಲವು

20. ವ್ಯಕ್ತಿತ್ವದ ಅಪೂರ್ಣತೆಯನ್ನು ವಸ್ತುವಾಗಿಸಿಕೊಂಡ ನಾಟಕ

(A) ಜೀಕೆ ಮಾಸ್ತರ ಪ್ರಣಯ ಪ್ರಸಂಗ

(B) ಸಂಗ್ಯಾ ಬಾಳ್ಯ

(C) ಸಿರಿಸಂಪಿಗೆ

(D) ಋಷ್ಯಶೃಂಗ

21. ಕಾವ್ಯಾವಲೋಕನದ ಮೊದಲ ಅಧಿಕರಣ

(A) ಗುಣವಿವೇಕ

(B) ಶಬ್ದಸ್ಮೃತಿ

(C) ರೀತಿ ಕ್ರಮರಸ ನಿರೂಪಣ

(D) ಕವಿ ಸಮಯ

22. ''ಪ್ರಜ್ಞಾಪ್ರವಾಹ ತಂತ್ರ''ದ ಪರಿಕಲ್ಪನೆಯನ್ನು ಮೊದಲಿಗೆ ಬಳಸಿದವನು

(A) ವಿಲಿಯಂ ಜೇಮ್ಸ್

(B) ವರ್ಜಿನಿಯಾ ವೂಲ್ಫ್

(C) ಜೇಮ್ಸ್ ಜಾಯ್ಸ್

(D) ಡಿ. ರಿಚರ್ಡ್‌ಸನ್

23. ಇದು ಅರೇಬಿಕ್ ಭಾಷೆಯಿಂದ ಸ್ವೀಕರಿಸಿದ ಪದ

(A) ಪಗಾರ

(B) ಅನಾಮತ್ತು

(C) ಕರಾರು

(D) ದಯೆ

24. 'History of Kannada Language' ಕೃತಿಯನ್ನು ಬರೆದವರು

(A) ಡಿ. ಎಲ್. ನರಸಿಂಹಾಚಾರ್

(B) ಎಸ್. ಜಿ. ನರಸಿಂಹಾಚಾರ್

(C) ಆರ್. ನರಸಿಂಹಾಚಾರ್

(D) ಗೋವಿಂದಾಚಾರ್ಯ

**25.** ಸಂಸ್ಕೃತ ಭಾಷೆಯೊಂದಿಗೆ ಹೋಲಿಸಿದಾಗ ಕನ್ನಡದಲ್ಲಿ ಕಾಣುವ ಪ್ರತ್ಯೇಕತೆ

(A) ತದ್ಧಿತ ಪ್ರತ್ಯಯಗಳು

(B) ಮೂರು ಲಿಂಗಗಳು

(C) ಕೃತ್ ಪ್ರತ್ಯಯಗಳು

(D) ಎರಡು ವಚನಗಳು

**26.** 'Folklore' ಎನ್ನುವ ಶಬ್ದ ಪಶ್ಚಿಮದಲ್ಲಿ ಬಳಕೆಯಾದ ಕಾಲ

(A) 16 ನೇ ಶತಮಾನ

(B) 18 ನೇ ಶತಮಾನ

(C) 17 ನೇ ಶತಮಾನ

(D) 19 ನೇ ಶತಮಾನ

**27.** ಜಾನಪದ ಅಧ್ಯಯನದಲ್ಲಿ ವರ್ಗೀಕರಣ ಅಧ್ಯಯನ ಮಾಡಿದ ಮೊದಲ ವಿದ್ವಾಂಸ

(A) ಫ್ಲೀಟ್

(B) ಬಾಗ್ಸ್

(C) ಕ್ರೋಬರ್

(D) ಗ್ರೋವರ್

**28.** 'Hindu Manners, Customs and Ceremonies' ಈ ಕೃತಿಯನ್ನು ಬರೆದವರು

(A) ಕಿಟೆಲ್

(B) ರೈಸ್

(C) ಅಬೇದುಬಾಯ್

(D) ಗ್ರೋವರ್

**29.** 'ಡಾಂಬರು ಬಂದುದು' ಕಥೆಯ ಪಾತ್ರ

(A) ಶಂಭು

(B) ಕೃಷ್ಣೇಗೌಡ

(C) ಉಮ್ಮಾಬಿ

(D) ವಿಶ್ವನಾಥ

**30.** ಬಸವರಾಜು ಕಟ್ಟೀಮನಿಯವರ ಆತ್ಮಕಥೆ

(A) ಸುರಗಿ

(B) ಬರಹಗಾರನ ಬದುಕು

(C) ಹುಳಿಮಾವಿನ ಮರ

(D) ಭಿತ್ತಿ

**31.** ಗೊಬ್ಬರದ ಮೇಲೆ ಬರೆವುದೇ ಕಬ್ಬಮಂ

ಹಾ ಕಡುಕಷ್ಟ! ಕಲಿಕಾಲಕೇನೇನು ಬಂದಪುದೋ ?

ಕವಿಯ ಮೇಲಿನ ಸಾಲುಗಳಲ್ಲಿ

(A) ವ್ಯಂಗ್ಯವಿದೆ

(B) ವಿಷಾದವಿದೆ

(C) ಗೊಬ್ಬರದ ಬಗ್ಗೆ ತೆಗಳಿಕೆಯಿದೆ

(D) ಕಲಿಕಾಲದ ಬಗ್ಗೆ ಕೋಪವಿದೆ

**32.** 'ವಿಫಲ' ಕವನದ ಕವಿ

(A) ಬೇಂದ್ರೆ

(B) ಚೆನ್ನವೀರ ಕಣವಿ

(C) ಗೋಪಾಲಕೃಷ್ಣ ಅಡಿಗ

(D) ರಾಮಚಂದ್ರ ಶರ್ಮ

**33.** ಕನ್ನಡ ಭಾಷೆಯು ಇದರಿಂದ ನೇರವಾಗಿ ಸಿಡಿದು ಬಂದಿದೆ

(A) ಮೂಲ ಉತ್ತರ ದ್ರಾವಿಡ

(B) ಮೂಲ ಮಧ್ಯ ದ್ರಾವಿಡ

(C) ಮೂಲ ದ್ರಾವಿಡ

(D) ಮೂಲ ದಕ್ಷಿಣ ದ್ರಾವಿಡ

**34.** ಅಭಿವ್ಯಾಪಕ ಮತ್ತು ವ್ಯಾವರ್ಥಕ ಎಂಬ ಎರಡು ಪ್ರಕಾರಗಳನ್ನು ಹೊಂದಿರುವ ಸರ್ವನಾಮ

(A) ಮಧ್ಯಮ ಪುರುಷ ಬಹುವಚನ

(B) ಉತ್ತಮ ಪುರುಷ ಬಹುವಚನ

(C) ಪ್ರಥಮ ಪುರುಷ ಬಹುವಚನ

(D) ಆತ್ಮಾರ್ಥಕ ಸರ್ವನಾಮ ಬಹುವಚನ

**35.** ದ್ರಾವಿಡ ಭಾಷೆಯ ಲಿಂಗ ವ್ಯವಸ್ಥೆಯಲ್ಲಿ ಇದು ತಳಹದಿಯಾಗಿದೆ

(A) ಬುದ್ಧಿ ಇದ್ದುದ್ದು , ಇಲ್ಲದುದು

(B) ಗಂಡು ಮತ್ತು ಹೆಣ್ಣು

(C) ಗಾತ್ರದಲ್ಲಿ ದೊಡ್ಡದು, ಚಿಕ್ಕದು

(D) ಸಜೀವ, ನಿರ್ಜೀವ

**36.** ಇವುಗಳಲ್ಲಿ ಯಾವುದು ವರ್ಣಗಣಕ್ಕೆ ಉದಾಹರಣೆ ?

(A) ಅರ್ಕ

(B) ದಾನ

(C) ಭಾವನೆ

(D) ಸಮರಸ

**37.** ಇವುಗಳಲ್ಲಿ ಕರ್ನಾಟ ವಿಷಯ ಜಾತಿಗೆ ಸೇರಿದ ಛಂದೋರೂಪ

(A) ರಗಳೆ

(B) ಚಂಪಕಮಾಲೆ

(C) ಕಂದ

(D) ಛಂದೋವತಂಸ

**38.** ಲಾವಣ್ಯಂಲಯಮಾಯ್ತು ವಿಭ್ರಮ ವಿಳಾಸಂ ಮಾಯವಾಯ್ತಕ್ಕಟಾ

(A) ಸ್ರಗ್ಧರೆ

(B) ಚಂಪಕಮಾಲೆ

(C) ಶಾರ್ದೂಲ ವಿಕ್ರೀಡಿತಂ

(D) ಮತ್ತೇಭ ವಿಕ್ರೀಡಿತಂ

**39.** ಇದು ಮುಖ್ಯವಾಗಿ ಪಠ್ಯಕೇಂದ್ರಿತ ವಿಮರ್ಶೆ

(A) ರೂಪನಿಷ್ಠ

(B) ಚಾರಿತ್ರಿಕ

(C) ಮನಃಶಾಸ್ತ್ರೀಯ

(D) ಸಮಾಜಶಾಸ್ತ್ರೀಯ

**40.** 'ಪ್ರತಿಮೆಯು ಕಾವ್ಯಕ್ಕೆ ಅನಿವಾರ್ಯವಷ್ಟೇ ಅಲ್ಲ, ಇಡೀ ಕಾವ್ಯವೇ ಒಂದು ಪ್ರತಿಮೆ' ಎಂದು ಹೇಳಿದವರು

(A) ಹೊರೇಸ್

(B) ಸಿ. ಡಿ. ಲೂಯಿ

(C) ಲಾಂಜಿನಸ್

(D) ವರ್ಡ್ಸ್‌ವರ್ತ್

**ಬಹು ಆಯ್ಕೆಯ ಮಾದರಿ ಪ್ರಶ್ನೆಗಳು :**

**41.** ಇವು ಮಾತ್ರಾಗಣ ಪ್ರಧಾನ ಛಂದೋರೂಪಗಳು.

I) ಏಳೆ, ಸಾಂಗತ್ಯ

II) ಮಂದಾನಿಲ ರಗಳೆ, ಕಂದ

III) ಅಕ್ಕರಿಕೆ, ಮದನವತಿ

IV) ಭಾಮಿನಿ, ವಾರ್ಧಕ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು II

(B) II ಮತ್ತು IV

(C) I ಮತ್ತು IV

(D) III ಮತ್ತು IV

**42.** ಮೊದಲು ಅಂಶಗಣಪ್ರಧಾನವಾಗಿದ್ದು ಮುಂದಿನ ದಿನಗಳಲ್ಲಿ ಮಾತ್ರಾಗಣಕ್ಕೆ ತಿರುಗಿದ ಛಂದೋರೂಪಗಳು.

I) ತ್ರಿಪದಿ

II) ಸಾಂಗತ್ಯ

III) ಷಟ್ಪದಿ

IV) ಉತ್ಸಾಹ ರಗಳೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು II

(B) III ಮತ್ತು IV

(C) I ಮತ್ತು III

(D) II ಮತ್ತು IV

**43.** ದ್ರಾವಿಡ ಭಾಷಾಧ್ಯಯನಕ್ಕೆ ಮಹತ್ವದ ಕೊಡುಗೆ ನೀಡಿದವರು

I) ಗುಂಡರ್ಟ್, ಬ್ಲೂಮ್‌ಫೀಲ್ಡ್

II) ಎಂ. ಬಿ. ಎಮಿನೊ, ಟಿ. ಬರೊ

III) ರೆವರೆಂಡ್ ಕಿಟೆಲ್, ಎಡ್ವರ್ಡ್ ಸಫೀರ್

IV) ರೋಬರ್ಟ್ ಕಾಲ್ಡವೆಲ್, ಭ. ಕೃಷ್ಣಮೂರ್ತಿ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು II

(B) II ಮತ್ತು III

(C) III ಮತ್ತು IV

(D) II ಮತ್ತು IV

**44.** ಪೂರ್ವದ್ರಾವಿಡದ ಪದಾದಿಯ 'ಉ' ಕಾರವು 'ಒ' ಕಾರವಾಗಿ ಪರಿವರ್ತನೆಗೊಳ್ಳದ ಭಾಷೆಗಳು

I) ತಮಿಳು

II) ಕನ್ನಡ

III) ಮಲೆಯಾಳ

IV) ತೆಲುಗು

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು II

(B) I ಮತ್ತು III

(C) III ಮತ್ತು IV

(D) II ಮತ್ತು III

**45.** ಕೀರ್ತಿನಾಥ ಕುರ್ತಕೋಟಿಯವರ ಕೃತಿಗಳು

I) ಭೃಂಗದ ಬೆನ್ನೇರಿ

II) ಸಾತತ್ಯ

III) ಸ್ವಪ್ನದರ್ಶಿ

IV) ಕಂಡದ್ದು ಕಂಡ ಹಾಗೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) II ಮತ್ತು IV

(B) I ಮತ್ತು III

(C) III ಮತ್ತು II

(D) I ಮತ್ತು II

**46.** ಇವು ಕನ್ನಡ ಭಾಷೆಯಲ್ಲಿ ನಡೆದ ಆಧುನೀಕರಣಕ್ಕೆ ಉದಾಹರಣೆಗಳು :

I) ವಿಕೇಂದ್ರೀಕರಣ, ಭೂಗತ

II) ಹಾಲು, ಜೇನು

III) ಕಪ್ಪು ಸಂತೆ, ಕಳ್ಳಭಟ್ಟಿ

IV) ಮೊಲ, ಹುಲ್ಲು

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು III

(B) I ಮತ್ತು II

(C) II ಮತ್ತು III

(D) III ಮತ್ತು IV

**47.** ತೇಜಸ್ವಿಯವರ 'ಅವನತಿ' ಕತೆಯಲ್ಲಿ ಬರುವ ಪಾತ್ರಗಳು

I) ಸೂರಾಚಾರಿ, ಕೃಷ್ಣೇಗೌಡ

II) ಈರೇಗೌಡ, ಮಂದಣ್ಣ

III) ಸುಲೇಮಾನ್ ಹಾಜಿ, ಬಸಲಿಂಗ

IV) ಯಶೋದೆ, ಅಂಗಡಿ ಕಂಬಯ್ಯ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು II

(B) I ಮತ್ತು IV

(C) II ಮತ್ತು III

(D) IV ಮತ್ತು III

**48.** ಮನ್ಮಥನ ಪ್ರಸಂಗವಿರುವ ಕೃತಿಗಳು

I) ಗಿರಿಜಾ ಕಲ್ಯಾಣ

II) ಕಬ್ಬಿಗರ ಕಾವಂ

III) ಯಶೋಧರ ಚರಿತೆ

IV) ರಾಜಶೇಖರ ವಿಳಾಸ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು II

(B) I ಮತ್ತು III

(C) II ಮತ್ತು IV

(D) III ಮತ್ತು IV

49. ಇವು ಕುಂ. ವೀರಭದ್ರಪ್ಪ ಅವರ ಕೃತಿಗಳು

I) ಬೇಲಿಯ ಹೂಗಳು

II) ಮಾಗಿ

III) ಗತಿ

IV) ಅಪೂರ್ವ ಚಿಂತಾಮಣಿ ಕತೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು IV

(B) I ಮತ್ತು II

(C) III ಮತ್ತು I

(D) IV ಮತ್ತು III

50. ಇವು ಭಾಮಿನಿ ಷಟ್ಪದಿಯಲ್ಲಿ ರಚಿತವಾಗಿರುವ ಕೃತಿಗಳು.

I) ಸೋಮನಾಥ ಚಾರಿತ್ರ ಮತ್ತು ಪದ್ಮರಾಜ ಪುರಾಣ

II) ಬಸವ ಪುರಾಣ ಮತ್ತು ಪ್ರಭುಲಿಂಗ ಲೀಲೆ

III) ಭಾವಚಿಂತಾರತ್ನ ಮತ್ತು ಹರಿಶ್ಚಂದ್ರ ಕಾವ್ಯ

IV) ನಳಚರಿತೆ ಮತ್ತು ಭಾಗವತ

**ಇವುಗಳಲ್ಲಿ ಸರಿಯಾದ ಉತ್ತರ :**

(A) II ಮತ್ತು IV

(B) I ಮತ್ತು III

(C) II ಮತ್ತು III

(D) III ಮತ್ತು IV

51. ಇವು ಶ್ರೀರಂಗರ ನಾಟಕಗಳು

I) ಕತ್ತಲೆ-ಬೆಳಕು ಮತ್ತು ಹುತ್ತದಲ್ಲಿ ಹುತ್ತ

II) ದರಿದ್ರನಾರಾಯಣ ಮತ್ತು ಶೋಕಚಕ್ರ

III) ಕೇಳು ಜನಮೇಜಯ ಮತ್ತು ನೀ ಕೊಡೆ, ನಾ ಬಿಡೆ

IV) ಹರಿಜನ್ವಾರ ಮತ್ತು ಸಪ್ತಪದಿ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು III

(B) II ಮತ್ತು III

(C) I ಮತ್ತು II

(D) III ಮತ್ತು IV

52. ಇವುಗಳು ಕನ್ನಡ ಲಾಕ್ಷಣಿಕರು ರಚಿಸಿದ ಅಲಂಕಾರಶಾಸ್ತ್ರ ಗ್ರಂಥಗಳು

I) ಕಾವ್ಯಾವಲೋಕನ, ಉದಯಾದಿತ್ಯಾಲಂಕಾರ

II) ಕಾವ್ಯಾಲಂಕಾರ, ಕಾವ್ಯಪ್ರಕಾಶ

III) ರಸರತ್ನಾಕರ, ಶೃಂಗಾರ ರತ್ನಾಕರ

IV) ಕಾವ್ಯಾದರ್ಶ, ರಸಗಂಗಾಧರ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು IV

(B) II ಮತ್ತು III

(C) III ಮತ್ತು IV

(D) I ಮತ್ತು III

**53.** ಇವು ಅರ್ಥಾಲಂಕಾರಗಳು

I) ಅನುಪ್ರಾಸ

II) ಯಮಕ

III) ದೃಷ್ಟಾಂತ

IV) ಉತ್ಪ್ರೇಕ್ಷೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು III

(B) II ಮತ್ತು IV

(C) III ಮತ್ತು IV

(D) II ಮತ್ತು III

**54.** ಇವು ಪಾಶ್ಚಾತ್ಯ ಕಾವ್ಯ ಮೀಮಾಂಸೆಯ ಪರಿಕಲ್ಪನೆಗಳು

I) ಭವ್ಯತೆ ಮತ್ತು ಅನುಕರಣೆ

II) ವ್ಯಂಗ್ಯಾರ್ಥ ಮತ್ತು ವಿರೇಚನ

III) ಅಭಿವ್ಯಕ್ತಿ ಮತ್ತು ಕಾವ್ಯಪ್ರತಿಮ

IV) ಧ್ವನಿ ಮತ್ತು ಅಭಿವ್ಯಕ್ತಿ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು II

(B) III ಮತ್ತು IV

(C) I ಮತ್ತು III

(D) III ಮತ್ತು II

**55.** ಇವು ಅಸಂಗತ ನಾಟಕಗಳು

I) ಗುರ್ತಿನವರು ಮತ್ತು ಕುಂಟಾಕುಂಟಾ ಕುರವತ್ತಿ

II) ಬೊಂತೆ ಮತ್ತು ಸುಗುಣ ಗಂಭೀರ

III) ಗೋಡೆ ಬೇಕೆ ಗೋಡೆ ಮತ್ತು ಇಲಿಬೋನು

IV) ಆನಿ ಬಂತಾನಿ ಮತ್ತು ಗುಣಮುಖ

**ಇವುಗಳಲ್ಲಿ ಸರಿಯಾದ ಉತ್ತರ :**

(A) I ಮತ್ತು II

(B) I ಮತ್ತು III

(C) I ಮತ್ತು IV

(D) III ಮತ್ತು IV

**ವಿವರಣೆ ಆಧಾರಿತ ಆಯ್ಕೆಯ ಮಾದರಿ :**

**56.** **ಹೇಳಿಕೆ** : 'ಶ್ರೀ ರಮಣಿ ತೋರಮುತ್ತಿನ ಹಾರದೊಳೊಲೆದುಯ್ಯಲಾಡೆ.'

**ವಿವರಣೆ** : 'ದಪ್ಪನೆಯ ಮುತ್ತಿನ ಹಾರದಲ್ಲಿ ರಮಣಿ ಆಡುತ್ತಿರಲು.'

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**57. ಹೇಳಿಕೆ** : ಪೆಱಿಂಗಿಸೆಡೆಗುಡದ ಅಸಹಾಯ ಕವೀಶ್ವರಂ ಕುರುಳ್ಗಳ ಸವಣಂ

**ವಿವರಣೆ** : 'ಬೇರೆಯ ಕವಿಗಳು ಬಂದಾಗ ಅಸಹಾಯಕ ಸ್ಥಿತಿಯಲ್ಲಿರುವ ಕವೀಶ್ವರನಾದ ಕುರುಳ್ಗಳ ಸವಣ'

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

**58. ಹೇಳಿಕೆ** : ಪರಪದದೊಳ್ ಅರ್ಥವರ್ತನಮಿರೆ ತತ್ಪುರುಷಂ

**ವಿವರಣೆ** : ಅನ್ಯ ಪದದ ಅರ್ಥಪ್ರಾಧಾನ್ಯವನ್ನು ಹೊಂದಿರುವುದು ತತ್ಪುರುಷ ಸಮಾಸವಾಗುತ್ತದೆ.

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ತಪ್ಪು, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ಸರಿ, ವಿವರಣೆ ತಪ್ಪು

**59. ಹೇಳಿಕೆ** : ''ವಸಂತ ಋತುವಲ್ಲದೊಡಂ ಮುದದಿಂದೆ ಭೋಕನಂಕುರಿಸಿತು ಮಾವು, ಪಲ್ಲವಿಸಿತಲ್ಲಿಯಶೋಕೆ ''

**ವಿವರಣೆ** : ವಸಂತನ ಆಗಮನದಿಂದಾಗಿ ಮಾವು ಚಿಗುರಿತು, ಅಶೋಕವು ಕುಡಿಯೊಡೆಯಿತು.

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**60. ಹೇಳಿಕೆ** : ಶುಚಿಯಾಗಿರೆ ದೇವತೆಗಳು ಸಲಹುವರು

ಶುಚಿಯನು ಪಿತೃಗಳೋವುವರು

ಶುಚಿಗಂಜುವುದು ಪ್ರೇತ ಭೂತಗಳು

**ವಿವರಣೆ** : ಶುದ್ಧವಾದ ನಡೆಯುಳ್ಳವರಾದರೆ ದೇವತೆಗಳು ಕಾಪಾಡುವರು

ಶುಚಿತ್ವವನ್ನು ಪಿತೃಗಳು ಪ್ರೀತಿಸುವರು

ಶುಚಿತ್ವಕ್ಕೆ ಭೂತ ಪ್ರೇತಗಳು ಅಂಜುವವು

(A) ಹೇಳಿಕೆ ಸರಿ, ವಿವರಣೆ ತಪ್ಪು

(B) ಹೇಳಿಕೆ ಸರಿ, ವಿವರಣೆ ಸರಿ

(C) ಹೇಳಿಕೆ ತಪ್ಪು, ವಿವರಣೆ ತಪ್ಪು

(D) ಹೇಳಿಕೆ ತಪ್ಪು, ವಿವರಣೆ ಸರಿ

**61. ಹೇಳಿಕೆ**: 'ಅಕ್ಕರಮುಂ ವರ್ಣಮುಮೆಂದಕ್ಕುಂ ಶುದ್ಧಾಕ್ಷರಕ್ಕೆ ನಾಮಂ'

**ವಿವರಣೆ** : 'ಅಕ್ಷರ ಹಾಗೂ ವರ್ಣಗಳನ್ನು ಶುದ್ಧಾಕ್ಷರಕ್ಕೆ ಸಮಾನವಾಗಿ ಪರಿಗಣಿಸುವುದು ಸಮಂಜಸವಲ್ಲ.'

(A) ಹೇಳಿಕೆ ಸರಿ, ವಿವರಣೆ ಸರಿ

(B) ಹೇಳಿಕೆ ಸರಿ, ವಿವರಣೆ ತಪ್ಪು

(C) ಹೇಳಿಕೆ ತಪ್ಪು, ವಿವರಣೆ ಸರಿ

(D) ಹೇಳಿಕೆ ತಪ್ಪು, ವಿವರಣೆ ತಪ್ಪು

**ಬಹು ಆಯ್ಕೆಯ ಜೋಡಣೆಯ ಮಾದರಿ :**

**62.** a) ಹಲ್ಮಿಡಿ ಶಾಸನ 1) ಕ್ರಿ.ಶ. 1058
b) ಗಂಗಾಧರಂ ಶಾಸನ 2) ಕ್ರಿ.ಶ. 450
c) ಲಕ್ಕುಂಡಿ ಶಾಸನ 3) ಕ್ರಿ.ಶ. 950
d) ನಾಗಾಯಿ ಶಾಸನ 4) ಕ್ರಿ.ಶ. 1007
5) ಕ್ರಿ.ಶ. 900

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (A) | 1 | 3 | 4 | 2 |
| (B) | 5 | 4 | 3 | 1 |
| (C) | 2 | 4 | 3 | 5 |
| (D) | 2 | 3 | 4 | 1 |

**63.** a) ಶ್ರೀವಿಜಯ 1) ಮಿಸುಕದ ಸಕ್ಕದಮನಿಕ್ಕುವವನು ಕವಿಯೆ
b) ಪಂಪ 2) ಕಸವರಮೆಂಬುದು ಮಿಗೆ ಸೈರಿಸ ಲಾರ್ಪೊಡೆ ಪರವಿಚಾರಮಂ ಧರ್ಮಮುಮಂ
c) ನಯಸೇನ 3) ಪಲವು ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾ ಆನಾ ನೆಲನಂ
d) ಆಂಡಯ್ಯ 4) ತನು ರೂಪ ವಿಭವ ಯೌವನವನ ಸೌಭಾಗ್ಯಾಯುರಾದಿಗಳಿಗೆ ಕುಡು ಮಿಂಚಿನ ಪೊಳೆಪು
5) ಅನುಜನ ನೆತ್ತರ ನೀಂಟಿದನ ನೆತ್ತರಂ ಜೀವಸಹಿತ ಮೀಂಟದೆ

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (A) | 1 | 3 | 4 | 2 |
| (B) | 2 | 4 | 1 | 3 |
| (C) | 2 | 3 | 4 | 1 |
| (D) | 1 | 5 | 4 | 2 |

**64.** a) ಭಾರತೀಯ ಮೂಲ ಸಿದ್ಧಾಂತ 1) ವಿಲ್ಮ್ ಹೆಲ್ಮ್
b) ಪುರಾಣ ಮೂಲ ಸಿದ್ಧಾಂತ 2) ಜೂಲಿಯನ್ ಕ್ರಾಹ್ನ್
c) ಮಾನವಶಾಸ್ತ್ರೀಯ ಸಿದ್ಧಾಂತ 3) ಕೊಹ್ಲರ್
d) ಚಾರಿತ್ರಿಕ ಭೌಗೋಳಿಕ ಸಿದ್ಧಾಂತ 4) ಟೈಲರ್
5) ವಿ. ಜೆ. ಪ್ರಾಪ್

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (A) | 3 | 1 | 2 | 4 |
| (B) | 5 | 2 | 1 | 4 |
| (C) | 3 | 1 | 4 | 2 |
| (D) | 5 | 4 | 2 | 1 |

**65.** a) ಚಾರಿತ್ರಿಕ ವಿಮರ್ಶೆ 1) ಜಾರ್ಜ್ ಲುಕಾಸ್
b) ಸಮಾಜ ಶಾಸ್ತ್ರೀಯ ವಿಮರ್ಶೆ 2) ಅರ್ನೆಸ್ಟ್ ಜೋನ್ಸ್
c) ಮನಃ ಶಾಸ್ತ್ರೀಯ ವಿಮರ್ಶೆ 3) ಟೇನ್
d) ಪ್ರಾಯೋಗಿಕ ವಿಮರ್ಶೆ 4) ವರ್ಡ್ಸ್‌ವರ್ಥ್
5) ಟಿ. ಎ. ರಿಚರ್ಡ್ಸ್

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (A) | 3 | 1 | 2 | 4 |
| (B) | 4 | 3 | 1 | 5 |
| (C) | 2 | 1 | 3 | 4 |
| (D) | 3 | 1 | 2 | 5 |

**66.** a) ಸ್ಥಾಯಿ ಭಾವ — 1) ಗದ್ಯಶೈಲಿ

b) ಸಂಚಾರಿ ಭಾವ — 2) ಮಾಧುರ್ಯ

c) ವೃತ್ತ ಗಂಧಿ — 3) ಹಾಸ

d) ಶಬ್ದಗುಣ — 4) ರೌದ್ರ

5) ಗರ್ವ

**ಇವುಗಳಿಗೆ ಸರಿಯಾದ ಉತ್ತರ :**

| | **(a)** | **(b)** | **(c)** | **(d)** |
|---|---|---|---|---|
| (A) | 2 | 4 | 3 | 1 |
| (B) | 3 | 5 | 1 | 2 |
| (C) | 3 | 4 | 2 | 5 |
| (D) | 1 | 3 | 5 | 2 |

**67.** ಭಾಷೆ ಮತ್ತು ಸರ್ವನಾಮಗಳ ಹೊಂದಾಣಿಕೆಯನ್ನು ಗುರುತಿಸಿ :

a) ತಮಿಳು — 1) ಎಂಕುಳು

b) ತೆಲುಗು — 2) ಆಮ್

c) ತುಳು — 3) ನಾಮ್

d) ಕೊಡಗು — 4) ಮನಮು

5) ಎಂಗ

**ಇವುಗಳಿಗೆ ಸರಿಯಾದ ಉತ್ತರ :**

| | **(a)** | **(b)** | **(c)** | **(d)** |
|---|---|---|---|---|
| (A) | 2 | 5 | 4 | 3 |
| (B) | 5 | 1 | 3 | 2 |
| (C) | 4 | 3 | 2 | 5 |
| (D) | 3 | 4 | 1 | 5 |

**68.** a) ತತ್ಪುರುಷ — 1) ಓದುವ ಹುಡುಗ

b) ಗಮಕ — 2) ಅಂಗೈ

c) ಕರ್ಮಧಾರಯ — 3) ಮಾತುಜಾಣ

d) ಅಂಶಿ — 4) ಇಮ್ಮಡಿ

5) ಹೊಸಗನ್ನಡ

**ಇವುಗಳಿಗೆ ಸರಿಯಾದ ಉತ್ತರ :**

| | **(a)** | **(b)** | **(c)** | **(d)** |
|---|---|---|---|---|
| (A) | 2 | 3 | 1 | 4 |
| (B) | 3 | 1 | 5 | 2 |
| (C) | 5 | 2 | 3 | 1 |
| (D) | 1 | 5 | 2 | 3 |

**69.** a) ಬೇಟೆ — 1) ಅನುಪಮಾ ನಿರಂಜನ

b) ಅನಂತ–ಗೀತ — 2) ಶ್ರೀಕೃಷ್ಣ ಆಲನಹಳ್ಳಿ

c) ಭುಜಂಗಯ್ಯನ ದಶಾವತಾರಗಳು — 3) ಕುಂ. ವೀರಭದ್ರಪ್ಪ

d) ಬಂಡಾಯ — 4) ಚಂದ್ರಶೇಖರ ಪಾಟೀಲ

5) ವ್ಯಾಸರಾಯ ಬಲ್ಲಾಳ

**ಇವುಗಳಿಗೆ ಸರಿಯಾದ ಉತ್ತರ :**

| | **(a)** | **(b)** | **(c)** | **(d)** |
|---|---|---|---|---|
| (A) | 2 | 5 | 1 | 4 |
| (B) | 3 | 1 | 2 | 5 |
| (C) | 5 | 4 | 3 | 2 |
| (D) | 1 | 3 | 5 | 2 |

**70.** a) ಅತ್ತ ಯಾರೋ ಹೋದ ಇತ್ತಾ ಯಾರೋ ಬಂದ ಕಡೆಗೆಲ್ಲ ಕಣ್ಣು ಬಿದ್ದು — 1) ಕುವೆಂಪು

b) ಕೊಳ್ಳಿರೀ ಮಗುವನ್ನು ಎಮ್ಮ ಮನೆ ಬೆಳಕನ್ನು — 2) ಕೆ. ಎಸ್. ನಿಸಾರ್ ಅಹಮದ್

c) ಬಲಗಡೆ ಕೈಯಲಿ ಮಿಂಚಿನ ಕತ್ತಿ! ಎಡಗಡೆ ಕೈಯಲಿ ಸಿಡಿಲಿನ ಬುತ್ತಿ! — 3) ವೀ. ಸೀತಾರಾಮಯ್ಯ

d) "ನಿನ್ನಿಷ್ಟದಂತೆ ಓದಿದವಳನ್ನೇ ಮದುವೆಯಾಗಪ್ಪ" — 4) ಗಂಗಾಧರ ಚಿತ್ತಾಲ

5) ಕೆ. ಎಸ್. ನರಸಿಂಹಸ್ವಾಮಿ

**ಇವುಗಳಿಗೆ ಸರಿಯಾದ ಉತ್ತರ :**

| | (a) | (b) | (c) | (d) |
|---|---|---|---|---|
| (A) | 5 | 3 | 1 | 2 |
| (B) | 3 | 5 | 1 | 2 |
| (C) | 4 | 3 | 1 | 5 |
| (D) | 5 | 4 | 3 | 1 |

**ಈ ಕೆಳಗಿನವುಗಳಲ್ಲಿ ಸರಿಯಾದ ಕಾಲಾನುಕ್ರಮಣಿಕೆಯನ್ನು ಗುರುತಿಸಿ.**

**71.** (A) ಪೊನ್ನ, ನಯಸೇನ, ಹರಿಹರ, ದುರ್ಗಸಿಂಹ
(B) ನಯಸೇನ, ದುರ್ಗಸಿಂಹ, ಪೊನ್ನ, ಹರಿಹರ
(C) ಹರಿಹರ, ಪೊನ್ನ, ನಯಸೇನ, ದುರ್ಗಸಿಂಹ
(D) ಪೊನ್ನ, ದುರ್ಗಸಿಂಹ, ನಯಸೇನ, ಹರಿಹರ

**72.** (A) ಸಿದ್ಧರಾಮ, ಹರಿಹರ, ರಾಘವಾಂಕ, ಕುಮಾರವ್ಯಾಸ
(B) ಹರಿಹರ, ಸಿದ್ಧರಾಮ, ಕುಮಾರವ್ಯಾಸ, ರಾಘವಾಂಕ
(C) ರಾಘವಾಂಕ, ಹರಿಹರ, ಕುಮಾರವ್ಯಾಸ, ಸಿದ್ಧರಾಮ
(D) ಕುಮಾರವ್ಯಾಸ, ಹರಿಹರ, ಸಿದ್ಧರಾಮ, ರಾಘವಾಂಕ

**73.** (A) ಕನಕದಾಸ, ಚಾಮರಸ, ಸಂಚಿ ಹೊನ್ನಮ್ಮ, ಶ್ರೀಪಾದರಾಯ
(B) ಶ್ರೀಪಾದರಾಯ, ಕನಕದಾಸ, ಚಾಮರಸ, ಸಂಚಿ ಹೊನ್ನಮ್ಮ
(C) ಕನಕದಾಸ, ಚಾಮರಸ, ಶ್ರೀಪಾದರಾಯ , ಸಂಚಿ ಹೊನ್ನಮ್ಮ
(D) ಚಾಮರಸ, ಶ್ರೀಪಾದರಾಯ, ಕನಕದಾಸ, ಸಂಚಿ ಹೊನ್ನಮ್ಮ

**74.** (A) ಎ. ಎನ್. ಮೂರ್ತಿ ರಾವ್, ರಂ. ಶ್ರೀ. ಮುಗಳಿ, ಕೆ. ಎಸ್. ನರಸಿಂಹಸ್ವಾಮಿ, ಸಿದ್ಧಯ್ಯ ಪುರಾಣಿಕ್
(B) ರಂ. ಶ್ರೀ. ಮುಗಳಿ, ಎ. ಎನ್. ಮೂರ್ತಿ ರಾವ್, ಕೆ. ಎಸ್. ನರಸಿಂಹಸ್ವಾಮಿ, ಸಿದ್ಧಯ್ಯ ಪುರಾಣಿಕ್
(C) ಎ. ಎನ್. ಮೂರ್ತಿ ರಾವ್, ರಂ. ಶ್ರೀ. ಮುಗಳಿ, ಸಿದ್ಧಯ್ಯ ಪುರಾಣಿಕ್, ಕೆ. ಎಸ್. ನರಸಿಂಹಸ್ವಾಮಿ
(D) ರಂ. ಶ್ರೀ. ಮುಗಳಿ, ಕೆ. ಎಸ್. ನರಸಿಂಹಸ್ವಾಮಿ, ಎ. ಎನ್. ಮೂರ್ತಿ ರಾವ್, ಸಿದ್ಧಯ್ಯ ಪುರಾಣಿಕ್

**75.** (A) ಭಾಷಾವಿಜ್ಞಾನದ ಮೂಲತತ್ವಗಳು, ಕನ್ನಡ ಕೈಪಿಡಿ, ಕನ್ನಡ ಭಾಷಾಶಾಸ್ತ್ರ, ಹಿಸ್ಟರಿ ಆಫ್ ಕನ್ನಡ ಲ್ಯಾಂಗ್ವೇಜ್
(B) ಕನ್ನಡ ಭಾಷಾಶಾಸ್ತ್ರ, ಕನ್ನಡ ಕೈಪಿಡಿ, ಹಿಸ್ಟರಿ ಆಫ್ ಕನ್ನಡ ಲ್ಯಾಂಗ್ವೇಜ್, ಭಾಷಾವಿಜ್ಞಾನದ ಮೂಲತತ್ವಗಳು
(C) ಹಿಸ್ಟರಿ ಆಫ್ ಕನ್ನಡ ಲ್ಯಾಂಗ್ವೇಜ್, ಕನ್ನಡ ಕೈಪಿಡಿ, ಕನ್ನಡ ಭಾಷಾಶಾಸ್ತ್ರ, ಭಾಷಾವಿಜ್ಞಾನದ ಮೂಲತತ್ವಗಳು
(D) ಹಿಸ್ಟರಿ ಆಫ್ ಕನ್ನಡ ಲ್ಯಾಂಗ್ವೇಜ್, ಕನ್ನಡ ಭಾಷಾಶಾಸ್ತ್ರ, ಕನ್ನಡ ಕೈಪಿಡಿ, ಭಾಷಾವಿಜ್ಞಾನದ ಮೂಲತತ್ವಗಳು

ಚಿತ್ತು ಬರಹಕ್ಕಾಗಿ ಸ್ಥಳ

**Space for Rough Work**

ಚಿತ್ತು ಬರಹಕ್ಕಾಗಿ ಸ್ಥಳ

**Space for Rough Work**